ಬಿಡತಿದ್ದಳಲ್ಲೋ... ಆ ಗಳಿಗೇಲಿ ಆ ನನ ಸ್ವಾಮೀ ಜ್ವತೆಗೆ ನಿನ ಪಾದ ಸೇರಿಸಿಕೊಳ್ಳಲಿಲ್ಲವಲ್ಲಪ್ಪಾ ಸಿವನೇ' ಎಂದು ರಾಗವಾಗಿ ಹಾಡಲಾರಂಭಿಸಿದ್ದಳು.

'ಊರಹಲ್ಲಿಗೆ ಸಿಕ್ಕಿಕೊಳ್ಳುವುದು ಬ್ಯಾಡ' ಎಂದ ರಾಜಣ್ಣ ದೊಡ್ಡವ್ವನ ಬಾಯಿ ಬಂದ್ ಮಾಡುವಷ್ಟು ಹೊತ್ತಿಗೆ ಎಸ್ಸೆಸ್ಸೆಲ್ಸಿ ಮುಗಿಸಿ ಮೂರು ವರ್ಷವಾದ ಅವಳ ಎರಡನೇ ಹುಡುಗ ಬೀರಯ್ಯ ಬೆದರುಕಣ್ಣು ಬಿಟ್ಟುಕೊಂಡು ಬಂದಿದ್ದ. ಬಂದವನು ರಂಪದ ಗಾಳಿ ತಗುಲಿ ಇನ್ನೇನು ಪೇರಿ ಕೀಳಬೇಕೆನ್ನುವಷ್ಟರೊಳಗೆ ರಾಜಣ್ಣ ಅವನನ್ನು ಕರೆದಾಗ, ಬೀರಯ್ಯ ಕಣ್ಣ ತುಂಬ ನೀರು ತುಂಬಿಕೊಂಡು 'ಯೆಲ್ಲಾದರೂ ಬೆಂಗಳೂರೊಳಗೊಂದು ಕ್ಯಲಸಾ ಕ್ವಡಿಸಣ್ಣಯ್ಯ, ಹೆಂಗಾರ ಇದ್ದುಕಂತಿನಿ' ಎಂದು ಹಳೆಯ ಬೇಡಿಕೆ ಮುಂದಿಟ್ಟು ಸುಮ್ಮನಾದ. ರಾಜಣ್ಣ 'ನೋಡನಿ, ನಾನೂವೆ ಮೂರು ನಾಕು ಕಡೇಲಿ ನೋಡಿದೀನಿ' ಎಂಬ ಹಳೆಯ ಪ್ಲೇಟನ್ನೇ ಹಾಕಿ ಹೊರಬಿದ್ದಿದ್ದ.

ಮುಂದಿನ ಸಲ ಬಂದಾಗ ಬೀರಯ್ಯ ಹೇಳದೆ ಕೇಳದೆ ಊರು ಬಿಟ್ಟಿದ್ದು ಮುಂತಾದ ಘಟನೆಗಳು ಒಂದರ ಹಿಂದೊಂದು ಮಿದುಳಿಗೆ ನುಗ್ಗತೊಡಗಿದಾಗ, ರಾಜಣ್ಣನಿಗೆ ತಾನೂ ಕೂಡ ಬೀರಯ್ಯನಂತೆ ಹೊಣೆಗೇಡಿ ಗಂಡುಮಗನೇ ಅಲ್ಲವಾ, ಅವನ ಅಣ್ಣಯ್ಯನಂತೆ ಊರ ಬಸವನೇ ಅಲ್ಲವಾ, ಊರಗಾತ್ರದ ಮೀಸೆ ಎಂದೋ ಇಳಿಬಿದ್ದ ಅಪ್ಪನ ಮೇಲೇ ಎಲ್ಲವನ್ನೂ ಹೇರಿ ಹೇಗೋ ದುಡ್ಡು ಪೀಕಿ ಸಿಟಿ ಸೇರಿದೋನಲ್ಲವಾ ಅಂತನ್ನಿಸಿತು... 'ತಾನು ಓದಿದೋನು, ತೀರಾ ಇವನ ಹಾಗಲ್ಲ' ಎಂದು ಸಮಾಧಾನ ಮಾಡಿಕೊಳ್ಳಲಾರಂಭಿಸಿದರೂ ಅದನ್ನು ಮೀರಿ ಒಳಗೆಲ್ಲೋ ಚುಚ್ಚೋಕೆ ಶುರುವಾಯಿತು. ವ್ಯತ್ಯಾಸವೆಂದರೆ, ದೊಡ್ಡವ್ವ ಇದನ್ನೆಲ್ಲ ಊರ ತುಂಬ ಸಾರುತ್ತಾ ಇದ್ದರೆ, ಅವ್ವ ತುಟಿ ಎರಡು ಮಾಡುತ್ತಾ ಇರಲಿಲ್ಲ ಅನ್ನುವುದಷ್ಟೆ...

ಶಿವಣ್ಣಯ್ಯ ಬಂದು 'ಹೆಂಗಿದೀಯ' ಅಂದಾಗಲೇ ಇವನು ತಲೆಕೊಡವಿಕೊಂಡದ್ದು. ಚಣ ಬಿಟ್ಟುಕೊಂಡು, 'ಚೆನಾಗಿದಿನಿ' ಅಂದ. ಶಿವಣ್ಣಯ್ಯ 'ಕೆರೆ ಹಿಂದಿನ ಗದ್ದೇನ ನಾರಿನ ಫ್ಯಾಕ್ಟರಿಗೆ ಮಾರಿಬಿಡಾನ ಅಂತಿದೀನಿ, ಪಾಲು ಮಾಡಿಬಿಡಾನ ಕಣಯ್ಯ' ಅಂದ. 'ಈ ಬೇವಾರ್ಸಿ ಊರಲಿ ಸಾಯದಕಿಂತ ತಿಪಟೂರಲ್ಲಿ ಬೀಡಿ ಅಂಗಡಿ ಇಡಬಕು ಅಂತ ಮಾಡಿದಿನಿ' ಅಂದ. ಇವೊಂದೂ ಕಿವಿಯ ಮೇಲೆಯೇ ಬೀಳದವನಂತೆ ರಾಜಣ್ಣ 'ಎತ್ತೋಗಿದ್ದೆ?' ಅಂದ. 'ಹಿಂಗೇ ಇರ್ತದಲ್ಲ ರಾಜಕೀಯ' ಎಂಬ ಉತ್ತರ ಕೇಳಿ, ರಾಜಣ್ಣ ಅಚ್ಚರಿಯಿಂದ ಕಣ್ಣಗಲಿಸಿದ. 'ಹೂಂ ಕಣಯ್ಯ, ಈ ಕಾಲ್ದಲಿ ರಾಜಕೀಯ ಮಾಡದೇನೆ ಬಾಳ್ಮೇ ಮಾಡಾಕಾಗ್ತದ, ಅದುಕ್ಕೇ ಕಾಂಗ್ರೆಸ್ ಸೇರಿದಿನಿ' ಅಂದ. 'ಎಲೆಕ್ಷನ್ ಟೈಮಲಿ ಮೂರು ಕಾಸು ಬಿಸಾಕ್ತರೆ ಅಂತ ಸುತ್ತುತೀಯಲ್ಲವ' ಎಂದು ರಾಜಣ್ಣ ಸಲಿಗೆಯಲ್ಲಿ ರೇಗಿದ.

'ನಿಂಗೇನು ಗ್ವತ್ತಾಗುತ್ತಯ್ಯ, ಒಂಟಿಬಡುಕನ ಹಂಗಿರೋ ಅಪಿಶಿಯಲ್ ಲೆವೆಲ್ಲಿನೋನು! ನಾವು ಈ ಊರಲಿ ಇದೇ ನೆಲದೇಲಿ ಬಾಳ್ಮೇ ಮಾಡಬೇಕಾದೋರು. ಜನ ಬೇಕು ಕಣಯ್ಯ ನಮೀಗೆ ಜನ' ಅಂದ ಶಿವಣ್ಣಯ್ಯ. 'ಅಲ್ಲ ಕಣಯ್ಯ, ಆ ಮಿಂಡರಗುಟ್ಟಿದೋರ ಪಾರ್ಟೀಲಿ' ಎಂದು ಆಲಾಪಿಸಿದ ರಾಜಣ್ಣ. 'ಯಾವುದಯ್ಯ ಸಾಚ? ಜನತವೆ? ದಳವೆ? ಯಲ್ಲಾ ವಂದೇನೆ ಅಲ್ಲವ. ಒಟ್ಟಲ್ಲಿ ಜನ ಬೇಕು ನಮೀಗೆ ಜನ' ಅಂದ ಜನನಾಯಕ. 'ಅಲ್ಲಯ್ಯ ರೈತರ ಸಂಗದೊಳಗೆ...' ಎಂದು ರಾಜಣ್ಣ ಬಾಯಿ ತೆರೆದರೆ, 'ಅಯ್ಯೋ ಆ ಚಳಾವಳಿ ಗಿಳಾವಳಿ ನಮೀಗೆ ಕೂಡಿ ಬರುವಂತದಲ್ಲಯ್ಯ' ಅನ್ನುತ್ತಾ ಶಿವಣ್ಣಯ್ಯ ಅಲ್ಲಿಂದ ಎದ್ದುನಿಂತ. ಬಲವಾಗಿ ಬೆಳೆಯುತ್ತಾ ಇದ್ದ ರೈತಸಂಘವನ್ನು ಶಿವಣ್ಣಯ್ಯನೂ ಅಪ್ಪನೂ ಸೇರಿ ಮುರಿದು ಬಿಸಾಕಿದ್ದನ್ನೂ ಮೊದಲೇ ಮುದುರಿಕೊಳ್ಳುತ್ತಾ ಇದ್ದ ಊರ ಜನ ಹಾಸಿಕೊಂಡು ಕವುಚಿ ಬಿದ್ದುಕೊಂಡಿದ್ದನ್ನೂ ಸಂಘವನ್ನೇ ಬಲವಾಗಿ ನೆಚ್ಚಿಕೊಂಡಿದ್ದ ಚೆನ್ನವೀರನೆಂಬ